*ಅರಕೆರೆ ಪಿ. ಸುರೇಶ್, ಭದ್ರಾವತಿ*
*ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂದರೆ ಏನು ಅರ್ಥ?*



ಕೈಗಿಂತ ಬಾಯಿ ಚಿಕ್ಕದೆಂದು!

*ಹರಳಹಳ್ಳಿ ಪುಟ್ಟರಾಜು, ಪಾಂಡವಪುರ*
*ಹೆಂಗಸರು ಕನ್ನಡಿಯನ್ನು ಗಂಡನಿಗಿಂತ ಹೆಚ್ಚಾಗಿ ಪ್ರೀತಿಸುವುದೇಕೆ?*
ಕನ್ನಡಿಯ ಮುಖದಲ್ಲಿ ಅತ್ತೆಯ ಛಾಯೆ ಕಾಣುವುದಿಲ್ಲ!

*ಬಿ.ಪಿ.ವೆಂಕಟೇಶ್, ಬೋಧನ ಹೊಸಹಳ್ಳಿ*
*ಅಳಿಸಲಾಗದ ಕೀರ್ತಿ, ಭರಿಸಲಾಗದ ವೆಚ್ಚ ಯಾವುದು?*
ಅಪಕೀರ್ತಿ, ತಿಮ್ಮಪ್ಪನ ಸಾಲದ ಬಡ್ಡಿ!

*ಗೀತಾ ಬರ್ಲ, ಬೆಂಗಳೂರು*
*ಕೊಳೆತು ನಾರುತ್ತಿರುವ ರಾಜಕೀಯಕ್ಕೆ ರಾಜಕಾರಣಿಗಳು ಅದು ಹೇಗೆ ಅಂಟಿಕೊಂಡೇ ಇರುತ್ತಾರೆ?*
ಕೊಳಚೆಯ ಸುತ್ತಣ ಸೊಳ್ಳೆಗಳಂತೆ!

*ಎಂ.ಎಸ್. ಧರ್ಮೇಂದ್ರ, ಬೆಂಗಳೂರು*
*ಪತಿಯೇ ದೇವರು ಹೋಗಿ ಪತಿಯೇ ಡ್ರೈವರು ಆಗಿಬಿಟ್ಟದೆಯಲ್ಲಾ...?*



ಸರಿಯೇ! ಹೆಣ್ಣು ಚಾಲೂಕಾದರೆ ಗಂಡು ಚಾಲಕ!

*ಎಂ.ಜಿ. ನೇಹವರ್ಷಿಣಿ, ಬಳ್ಳಾರಿ*
*ಬರೆಯಲಾಗದ್ದು, ಬರೆದದ್ದು ಓದಲಾಗದ್ದು ಏನು ಸಾರ್?*
ಮಕ್ಕಳು ಸ್ಲೇಟ್ ಮೇಲೆ ಗೀಚಿದ ಗೋಜಲು ಸಾಹಿತ್ಯ!

*ನೆ.ಸು. ಆನಂದ್, ಕತ್ತರಗುಪ್ಪೆ*
*ನಕಲೀ ವೈದ್ಯರಿಂದ ನಕಲೀ ಔಷಧಿಗಳನ್ನು ಸೇವಿಸುವ ರೋಗಿಯ ಬಗ್ಗೆ ತಾವೇನಂತೀರಿ?*
ಏನೂ ಅನ್ನುವುದಿಲ್ಲ; ಕೈ ಕಟ್ಟಿ, ಶಿರಬಾಗಿ ನಿಂತು ಎರಡು ನಿಮಿಷ ಮೌನ ಆಚರಿಸುವೆ!

*ಶ್ರೀಮತಿ ಸುಧಾರಾಜ್, ಮೈಸೂರು*
*ಅಪಘಾತಕ್ಕೆ ಅವಸರವೇ ಕಾರಣ; ಅವಸರಕ್ಕೆ...?*
ಅಪಘಾತ ತಪ್ಪಿಸಿಕೊಳ್ಳುವ ಯತ್ನವೇ ಕಾರಣ!

*ಕುಮಾರ ಚಲವಾದಿ, ಹೊಳೆನರಸಿಪುರ*
*ಪತ್ನಿಯ ಮುನಿಸಿಗೂ, ಪ್ರೇಯಸಿಯ ಮುನಿಸಿಗೂ ವ್ಯತ್ಯಾಸವೇನು ಗುರುವೆ?*
ಪತ್ನಿಯದು ಸಕಾರಣ, ಪ್ರೇಯಸಿಯದು ಸ್ವಕಾರಣ!

*ಪಿ.ಎಸ್. ಶ್ರೀವತ್ಸ, ಬೆಂಗಳೂರು*
*ಪುಢಾರಿಗಳ ಪಾದಯಾತ್ರೆ: ಇದರ ನಿಜವಾದ ಅರ್ಥ?*
ಏಕಾಕ್ಷರ ಲೋಪವೆಂದು ಅದು ಸೋಂ–ಪಾದ ಯಾತ್ರೆ!

*ದೇಶವಳ್ಳಿ ಶಿವು, ದೇಶವಳ್ಳಿ*
*ಈ ಹುಡ್ಗೀರೇ ಇಷ್ಟು, ಗಾಳಿ ಬಂದ ಕಡೆ ತೂರಿಕೊಳ್ತಾರೆ ಅಂತಾರಲ್ಲಾ, ಅವರು ವೈಟ್ ಲೆಸ್ಸಾ...?*
ಅವರು wait ಮಾಡುವುದು less ಅಷ್ಟೆ!

*ಲಕ್ಷ್ಮೀ, ಸಾಂಗಲಿ*
*ಹೆಣ್ಣು ತಪ್ಪು ಮಾಡಿದರೆ ಗಂಡು ಹೊಡೆಯುತ್ತಾನೆ; ಗಂಡು ತಪ್ಪು ಮಾಡಿದರೆ ಹೆಣ್ಣು ಏನು ಮಾಡಬೇಕು?*
ಗಂಡು ದೋಷಗಳ ಗಣಿ; ಆದರೆ ಕ್ಷಮಿಸಿ, ಇಲ್ಲವಾದರೆ ದೂರಕ್ಕೆ ಕ್ರಮಿಸಿ!

*ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ*
*ಸಚಿವರು ಬಡಪಾಯಿಯ ಹಲ್ಲೆ ಮಾಡಿದ್ದು 69ನೆಯ ಸ್ವಾತಂತ್ರ್ಯೋತ್ಸವದ ಕೊಡುಗೆಯೇ?*
ನಿಜವೇ; ಬಚ್ಚಾ ಕೂಡಾ ತುಚ್ಛ ಆಗುವಷ್ಟು ಸ್ವತಂತ್ರದ ಕೊಡುಗೆ!

*ಮೊಳಕಾಲ್ಮೂರು ಸುರೇಶ, ಬಳ್ಳಾರಿ*
*ಅಲ್ಲಾ ಸ್ವಾಮಿ, ಇದೇನನ್ಯಾಯ! ಕೆಂಪುಗೂಟದ ಕಾರನ್ನು ಓವರ್‌ಟೇಕ್ ಮಾಡುವುದೂ ಅಪರಾಧವೇ?*
ಖಂಡಿತ! ಹುಚ್ಚುನಾಯಿಯ ಮುಂದೆ ಓಡುವುದು ಮಹಾಪರಾಧ!

*ಬಿ.ಎಂ.ಪರಶಿವಮೂರ್ತಿ, ಬೆಂಗಳೂರು*
*ಹುಡುಗಿಯ ಕೈಗೆ ನೋವಾಗದಂತೆ ಬಳೆ ತೊಡಿಸುವುದು ಹೇಗೆ ಗುರುವೆ?*
ಅವಳು ಕ್ರೈಂ ನ್ಯೂಸ್ ನೋಡುತ್ತಿರುವಾಗ ತೊಡಿಸಿಬಿಡಿ. ಅದರ ದಾರುಣತೆಯ ಮುಂದೆ ಈ ನೋವು ಕಾಣದು!

## ಬಹುಮಾನಿತ ಪ್ರಶ್ನೆ

*ಎಚ್.ಆರ್. ದೇಸಾಯಿ, ರಾಯಚೂರು*
*ಸತ್ತನಂತರ ಸ್ವರ್ಗಕ್ಕೇ ಸೇರಬೇಕಾದರೆ ಸುಡಿಸಿಕೊಳ್ಳಬೇಕೋ? ಹೂಳಿಸಿಕೊಳ್ಳಬೇಕೋ?*
ಈ ವಿಷಯದಲ್ಲಿ ಚಾನ್ಸೇ ತೊಗೋಬೇಡಿ, ಮೊದಲು ಹೂಳಿಸಿಕೊಂಡು, ನಂತರ ಸುಡಿಸಿಕೊಂಡುಬಿಡಿ!

*ದುನಿಯಾ ವಸಂತ್, ದಾವಣಗೆರೆ*
*ಆಸ್ಪತ್ರೆಗೂ, ಜೈಲಿಗೂ ಇರುವ ವ್ಯತ್ಯಾಸವೇನು?*
ಜೈಲಿನಿಂದ ಸ್ವಂತ ಕಾಲಿನ ಮೇಲೆ ಹೊರಬರುವ ಸಾಧ್ಯತೆಗಳು ಹೆಚ್ಚು!

*ವಿಜಯ್ ಕೆ. ವಿಭೂತಿ, ಹರಿಹರ*
*ನಿಮ್ಮಂಥ ಬುದ್ಧಿಜೀವಿಗಳಿಂದ ಗಡಿಸಮಸ್ಯೆ ಬಗೆಹರಿಯಬಹುದಲ್ಲವೇ ಅಂಕಲ್?*
ನಮ್ಮಿಂದಲೇ? ಗಡಿ ಇರಲಿ, ನೆಗಡಿಯ ಸಮಸ್ಯೆಯೂ ಬಗೆಹರಿಯದು!

*ಸಂಗೀತ ರವಿರಾಜ್, ಚೆಂಬು*
*ಹುಡುಗಿಯರು ಮದುವೆ ನಿಗದಿಯಾದ ತಕ್ಷಣ ತಮ್ಮ ಮೊಬೈಲ್ ಸಂಖ್ಯೆಯನ್ನು ಬದಲಾಯಿಸುವುದೇಕೆ?*




ಓ! ಅದಕ್ಕೇ ನಿಮ್ಮ ಲೈನ್ ಸಿಗುತ್ತಿರಲಿಲ್ಲ! ಯಾವಾಗ ಮದುವೆ?

*ಎಂ.ಜಿ. ನೇಹವರ್ಷಿಣಿ, ಬಳ್ಳಾರಿ*
*ಪ್ರಪಂಚದಲ್ಲಿ ಒಂದು ವಾರ ಸೂರ್ಯನೇ ಹುಟ್ಟದಿದ್ದರೆ?*
8ನೆಯ ದಿನ ಮುಗ್ಗಲು ವಾಸನೆ ಹೋಗಿಸಲು ಮನುಷ್ಯನನ್ನೂ ಬಿಸಿಲಿಗೆ ಹಾಕಬೇಕಾದೀತು!

*ಗೌರಿ ಶೇಷಾದ್ರಿ, ಉತ್ತನಹಳ್ಳಿ*
*ಜನರ ನೆಮ್ಮದಿಯನ್ನು ಕೆಡಿಸಲೆಂದೇ ವಾಸ್ತುಶಾಸ್ತ್ರವನ್ನು ಕಂಡುಹಿಡಿದಿದ್ದಾರಾ ಸರ್?*
ಅಲ್ಲ; ವಾಸ್ತುಶಾಸ್ತ್ರಿಗಳ ಉದ್ಧಾರಕ್ಕಾಗಿ!

■ ರಾಮ್